**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ**

**ಎಸ್.ಸಿ .ನಂಃ 263/ 2023**

**ಚಾಸಾ-14, ಪ್ರಾಸಾ-12**

ಸಾಕ್ಷಿದಾರರ ಹೆಸರು : ನದೀಮ್
ತಂದೆಯ ಹೆಸರು : ಅಬ್ದುಲ್ ವಾಜಿದ್
ವಯಸ್ಸು : 36 ವರ್ಷ
ಉದ್ಯೋಗ : ವ್ಯಾಪಾರ
ವಾಸಸ್ಥಳ : ಹಾಸನ.

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 22.09.2025.**
**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ರವರ ಪರಿಚಯ ನನಗೆ ಇರುವುದಿಲ್ಲ. ಈಗ ನೋಡುತ್ತಿರುವ ನಿಪಿ-4 ರ ಅಮಾನತು ಮಹಜರ ಕ್ರಮದ ಮೇಲೆ ನನ್ನ ಸಹಿ ಕಂಡು ಬರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ನಿಪಿ-4 ರಲ್ಲಿರುವ ನನ ಸಹಿಯನ್ನು ಹಾಸನದ ಮಹಿಳಾ ಪೋಲಿಸ ಠಾಣೆಯಲ್ಲಿ ಸುಮಾರು ಎರಡು ವರ್ಷದ ಹಿಂದೆ ನಾನು ನನ್ನ ಸ್ವಂತ ಕೆಲಸಕ್ಕೆಂದು ಹೋಗಿದ್ದಂತಹ ಸಂದರ್ಭದಲ್ಲಿ ಮಾಡಿರುತ್ತೇನೆ.

2. ನನ್ನ ಸಮಕ್ಷಮ ಪೋಲಿಸರು ಚಾಸಾ-1 ರವರು ಹಾಜರುಪಡಿಸಿದ್ದು ಎನ್ನಲಾದ ಮು.ವಾ 1 ಹಾಗೂ 2 ರ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ. ನಿಪಿ-4 ರಲ್ಲಿ ಏನು ಬರೆದಿದೆ ಎಂಬುದನ್ನು ನಾನು ತಿಳಿದುಕೊಳ್ಳಲಿಲ್ಲ.

(ಈ ಸಂದರ್ಭದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಶೀಲಿಸಿ, ಪಾಟೀಸವಾಲಿಗೆ ಅನುಮತಿ ನೀಡಿದೆ)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

3. ದಿಃ 05.08.2023 ರಂದು ಈ ಪ್ರಕರಣಕ್ಕೆ ಸಂಬಂದಿಸಿದಂತೆ ಚಾಸಾ-1 ರವರು ಹಾಜರುಪಡಿಸಿದ್ದಂತಹ ತನ್ನ ಹಾಗೂ ತನ್ನ ತಮ್ಮನ ಮೊಬೈಲ್ ಗಳಾದ ನೀಲಿ ಬಣ್ಣದ ವಿವೋ ಮೊಬೈಲ ಹಾಗೂ ಮತ್ತೊಂದು ಕಪ್ಪು ಬಣ್ಣದ ವಿವೋ ಮೊಬೈಲಗಳನ್ನು ತನಿಖಾಧಿಕಾರಿಯು ತೆರೆದು ನೋಡಿದಾಗ ಮು.ಮಾ 1 ರ ನೀಲಿ ಬಣ್ಣದ ವಿವೋ ಫೋನ್ ನಲ್ಲಿನ ಎರಡು ಸ್ಲಾಟ್

ಗಳಲ್ಲಿ ಯಾವುದೇ ಸಿಮ್ ಕಾರ್ಡಗಳು ಕಂಡುಬರದಿದ್ದು, ಮತ್ತೊಂದು ಕಪ್ಪು ಬಣ್ಣದ ಮು.ಮಾ 2 ರ ವಿವೋ ಫೋನ್ ನ ಎರಡು ಸ್ಲಾಟ್ ಗಳಲ್ಲಿ ಸಿಮ್ ಕಾರ್ಡ ಕಂಡುಬರದಿದ್ದು, ಅವುಗಳನ್ನು ನನ್ನ ಸಮಕ್ಷಮ ಪೋಲಿಸರು ನಿಪಿ-4 ರಂತೆ ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿರುವ ಬರವಣಿಗೆಯನ್ನು ಓದಿ ತಿಳಿದು ಸಹಿ ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲೆಂದು, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು: 1 ಹಾಗೂ 2 ನೇ ಆರೋಪಿತರ ಪರ ಶ್ರೀ. ವಿ.ಮ್ ವಕೀಲರಿಂದ:**

ಆರೋಪಿಗಳ ಪರ ಯಾವುದೇ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಹಾಸನ.